ಅಲ್ಲಿ ಸಾವಿರಾರು ಜನ ವರ್ತಕರು ಫುಟ್‌ಪಾತ್ ಮೇಲೆ ಅಂಗಡಿಗಳನ್ನು ಇಟ್ಟುಕೊಂಡು ಬಹಳ ತೊಂದರೆಯಾಗಿದೆ. ಇದು ಬಹಳ ಮಹತ್ವದ ಪ್ರಶ್ನೆ, ಆದ್ದರಿಂದ ಇದು ಸಂಬಂದಪಟ್ಟ ಮಂತ್ರಿಗಳಿಗೆ ಕಳುಹಿಸದೆ ಇರುವುದು ದುರದೃಷ್ಟಕರ ಆದ್ದರಿಂದ ಸಂಭಂದಪಟ್ಟ ಮಂತ್ರಿಗಳು ಉತ್ತರ ಕೊಟ್ಟರೆ ಸರಿಯಾಗುತ್ತದೆ?

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು ಇದರಲ್ಲಿ ಪ್ರವೇಶಮಾಡಬೇಕು.

ಶ್ರೀ ಆರ್. ಗುಂಡೂರಾವ್ (ಮಾನ್ಯ ಮುಖ್ಯ ಮಂತ್ರಿಗಳು).—ಇದರ ಬಗ್ಗೆ ತಾವು ಹಿಂದೆಯೂ ಒಂದು ಸಾರಿ ಹೇಳಿದ್ದೀರಿ, ಮಾನ್ಯ ರಘುಪತಿಯವರೂ ಸಹ ಹೇಳಿದ್ದಾರೆ. ಅಲ್ಲಿ ಅನೇಕ ಜನರು ರಸ್ತೆಯ ಪಕ್ಕದಲ್ಲಿ ಕೂತುಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ಅವರಿಗೆ ಒಂದು ಜಾಗ ಮಾಡುವುದ ಕ್ಕೋಸ್ಕರ ಮಾರ್ಕೆಟನ್ನು ಕಟ್ಟಿಸಿ ವ್ಯಾಪಾರ ಮಾಡಿಸಬೇಕು. ಇದಕ್ಕೆ ನಾವು ಕ್ರಮ ಕೈಗೊಂಡಿಲ್ಲ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ನಾನು ಈ ವಿಷಯ ಯಾವ ಹಂತದಲ್ಲಿದೆ ಎನ್ನುವುದನ್ನು ಎಲ್ಲಾ ತರಿಸಿ, ತಮ್ಮನ್ನೂ ಕರೆಯಿಸಿ ಸೂಕ್ತಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

Railway Link from Chamarajanagar to Metupalyam

258 SRI M. C. BASAPPA (Chamarajanagar).—Will the Chief Minister be pleased to state.—

whether the State Government intends to recommend to Central Government to take up the Railway link from Chamarajanagar to Metupalyam as it is going to reduce the distance between them ?

SRI R. GUNDU RAO (Chief Minister).—The matter was taken up with the Ministry of Railways as early as 1972. They did not accept the project on the score that it was unremunerative.

ಶ್ರೀ ಎಂ. ಸಿ. ಬಸಪ್ಪ.—ನನ್ನ ಪ್ರಶ್ನೆಗೆ ಉತ್ತರವಾಗಿ, ಈ ಯೋಜನೆ ಫಲದಾಯಕವಲ್ಲ ಎಂದು ತಿಳಿಸಿದ್ದೀರಿ. ಇದು ಅನ್‌ರೆಮ್ಯುನರೇಟೀವ್ ಎಂದು ಹೇಳಬೇಕಾದರೆ ಇದರ ಬಗ್ಗೆ ಸರ್ವೆ ಏನಾದರೂ ಮಾಡಲಾಗಿದೆಯೇ, ಯಾವ ಆಧಾರದ ಮೇಲೆ ಇದನ್ನು ಅನ್‌ರೆಮ್ಯುನರೇಟೀವ್ ಎಂದು ಹೇಳುತ್ತೀರಿ?

† ಶ್ರೀ ಆರ್. ಗುಂಡೂರಾವ್.—ಇದು ಈಗ ಪ್ರಯೋಜನಕ್ಕೆ ಬರುವುದಿಲ್ಲ ಏಕೆಂದರೆ. ಈ ಯೋಜನೆಯನ್ನು ತೆಗೆದುಕೊಳ್ಳುವುದರಿಂದ ೨೫-೩೦ ಕೋಟಿ ರೂಪಾಯಿಗಳು ಖರ್ಚಾಗುತ್ತದೆ, ಇದನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಕೇಂದ್ರಸರ್ಕಾರದವರು ಹೇಳಿದ್ದಾರೆ. ರಾಜ್ಯ ಸರ್ಕಾರಕ್ಕೆ ಈ ರೈಲು ಮಾರ್ಗವನ್ನು ಮಾಡಬೇಕು ಎನ್ನುವ ಉದ್ದೇಶವಿದ್ದರೂ ಸಹ ರೈಲ್ವೆ ಇಲಾಖೆಯವರು ಅದನ್ನು ಒಪ್ಪುತ್ತಿಲ್ಲ. ಆದ್ದರಿಂದ ಬಹುಶಃ ಇದು ಈಗ ಕಾರ್ಯಗತವಾಗಲಾರದು.

ಶ್ರೀ ಎಂ. ಸಿ. ಬಸಪ್ಪ.—ನಾನು ನೇರವಾಗಿ ಕೇಳುತ್ತೇನೆ. ಈ ರೈಲು ಮಾರ್ಗಕ್ಕೆ ಸರ್ವೆಯಾಗಿದೆಯೇ ಆಗಿದ್ದರೆ ಯಾವಾಗ ಆಗಿದೆ? ಒಂದು ಚಾಮರಾಜ ನಗರ ಸತ್ಯಮಂಗಲ ಲೈನು ಎಕ್ಸ್‌ಟೆಂಡ್ ಮಾಡುವುದು, ಎರಡು ಚಾಮರಾಜನಗರ ಲೈನನ್ನು ಕೊಯಮತ್ತೂರಿಗೆ ಲಿಂಕ್ ಮಾಡುವುದು. ಮೂರು ಚಾಮರಾಜನಗರ ಮೆಟ್ಟುಪಾಳ್ಯ ಲೈನು ಸರ್ವೆ ಯಾಗಿದೆಯೇ, ಈ ರೈಲು ಮಾರ್ಗಗಳು ರೆಮ್ಯುನರೇಟೀವ್ ಅಲ್ಲವೆಂದು ಅವರು ತಿಳಿಸಿದ್ದಾರೆಯೇ

ಶ್ರೀ ಆರ್ ಗುಂಡೂರಾವ್.—ಚಾಮರಾಜನಗರ ಸತ್ಯಮಂಗಲದ ರೈಲು ಮಾರ್ಗಕ್ಕೆ ಹಿಂದೆ ೧೯೪೯-೪೯ರಲ್ಲಿಯೇ ಸರ್ವೆ ಮಾಡಿದ್ದರು, ಅದು ಇನ್ನೂ ಕಾರ್ಯಗತವಾಗಿಲ್ಲ. ಸೇಲಂ ಬೆಂಗಳೂರು ರೈಲು ಮಾರ್ಗ ಪ್ರಾರಂಭ ಮಾಡಿದಮೇಲೆ ಬಹುಶಃ ಮೆಟ್ಟುಪಾಳ್ಯ ಲೈನಿನ ಅವಶ್ಯಕತೆ ಇರಲಿಲ್ಲ ವೆಂದು ಕಾಣುತ್ತದೆ. ಈ ರೈಲು ಮಾರ್ಗಕ್ಕೆ ಜಾಸ್ತಿ ಹಣ ಖರ್ಚಾಗುತ್ತದೆಂದು ಅದನ್ನು ಕೈಬಿಟ್ಟಿರ ಬಹುದು.

---

† Indicates that remarks or speeches have not been revised by the member concerned.

ಶ್ರೀ ಎಂ. ಸಿ. ಬಸಪ್ಪ.—ನಮ್ಮ ಸರ್ಕಾರದವರು ಈ ರೀತಿಯಲ್ಲಿ ಊಹೆ ಮಾಡುವುದು ಬೇಡ. ಕೊಯಮತ್ತೂರು–ಚಾಮರಾಜನಗರ ಲೈನನ್ನು ಮಾಡುವುದರಿಂದ ಸುಮಾರು ೨೦೦ ಕಿಲೋಮೀಟರ್ ಉದ್ದ ಉಳಿತಾಯವಾಗುತ್ತದೆ, ಮೆಟ್ಟುಪಾಳ್ಯಂ ಲೈನನ್ನು ಮಾಡುವುದರಿಂದ ಸುಮಾರು ೨೫೦ ಕಿಲೋಮೀಟರ್ ಉದ್ದ ಉಳಿತಾಯವಾಗುತ್ತದೆ. ಈ ದೃಷ್ಟಿಯಿಂದ ಚಾಮರಾಜನಗರ ಮೆಟ್ಟುಪಾಳ್ಯಂ ಲೈನ್‌ಗೆ ಸರ್ವೆ ಮಾಡಿ ಅದನ್ನು ತೆಗೆದುಕೊಳ್ಳುತಕ್ಕದ್ದರ ಬಗ್ಗೆ ನಮ್ಮ ಸರ್ಕಾರದ ನಿಲುವು ಏನು?

ಶ್ರೀ ಆರ್. ಗುಂಡೂರಾವ್.—ನಾವು ಸಹ ಈ ರೈಲು ಮಾರ್ಗಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತೇವೆ. ಆದರೆ ಕೇಂದ್ರ ಸರ್ಕಾರದವರು ಇವುಗಳ ಫೀಸಿಬಿಲಿಟಿ, ಅನ್‌ಫೀಸಿಬಿಲಿಟಿ, ರೆಮ್ಯುನರೇಟೀವ್, ಅಥವಾ ಅನ್‌ರೆಮ್ಯುನರೇಟೀವ್ ಇವನ್ನೆಲ್ಲಾ ಯೋಚನೆ ಮಾಡಿ ಯಾವುದು ಅವಶ್ಯಕತೆ ಇದೆಯೋ ಅದನ್ನು ತೆಗೆದುಕೊಳ್ಳುತ್ತಾರೆ. ನಮಗೆ ತಿಳಿದಿರುವಂತೆ ಈ ರೈಲು ಯೋಜನೆಗೆ ಜಾಸ್ತಿ ಹಣ ಖರ್ಚಾಗುವುದರಿಂದ ಇದು ಆಗುವುದಿಲ್ಲ. ಕೇಂದ್ರ ಸರ್ಕಾರಕ್ಕೆ ನಾವು ಪುನಃ ಬರೆಯುತ್ತೇವೆ.

ಶ್ರೀ ಎಂ. ಸಿ. ಬಸಪ್ಪ.—ಮುಂದೆ ಆಗತಕ್ಕ ರೈಲು ಮಾರ್ಗಗಳಲ್ಲಿ ನಮ್ಮ ಸ್ಟೇಟ್‌ಗೆ ಪ್ರಿಯಾರಿಟಿ ಕೊಡಬೇಕು ಎಂದು ಕೇಳುವಂಥ ಒಂದು ವಾಗ್ದಾನವನ್ನು ಕೊಡುವಿರಾ?

ಶ್ರೀ ಆರ್. ಗುಂಡೂರಾವ್.—ನಾನು ತಮ್ಮ ಸಲಹೆಯನ್ನು ಒಪ್ಪುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ನಮ್ಮ ರಾಜ್ಯದಲ್ಲಿ ರೈಲ್ವೆ ದಾರಿ ಯಾವ ವೇಗದಲ್ಲಿ ಬೆಳೆಯಬೇಕಾಗಿತ್ತೊ ಆ ವೇಗದಲ್ಲಿ ಬೆಳೆಯುತ್ತಿಲ್ಲ ಎನ್ನುವುದನ್ನು ತಾವೂ ಒಪ್ಪಿಕೊಳ್ಳುತ್ತೀರಿ. ಬಹುಶ; ಹಾಸನ ಮಂಗಳೂರು ಲೈನನ್ನು ಬಿಟ್ಟರೆ ಕಳೆದ ೩೦ ವರ್ಷಗಳಿಂದ ಹೊಸ ಲೈನನ್ನು ಹಾಕಲಿಕ್ಕೆ ಆಗಿಲ್ಲ. ಮೀಟರ್ ಗೇಜ್‌ನ್ನು ಬ್ರಾಡ್ ಗೇಜ್ ಮಾಡತಕ್ಕ ಕೆಲಸ ಬೆಂಗಳೂರು ಮೈಸೂರು ಒಂದನ್ನು ಬಿಟ್ಟರೆ ಗುಂತಕಲ್–ಬೆಂಗಳೂರು ಲೈನಿಗೆ ಇನ್ನೂ ಮಂಜೂರಾತಿ ಸಿಕ್ಕಿಲ್ಲ.

ಶ್ರೀ ಆರ್. ಗುಂಡೂರಾವ್.—ಈಗ ಸಿಕ್ಕುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ನಿಮ್ಮ ಪ್ರಭಾವದಿಂದ ಅದಕ್ಕೆ ಮಂಜೂರಾತಿ ಸಿಕ್ಕರೆ ನಾನು ಮೆಚ್ಚಿಗೆಯನ್ನು ವ್ಯಕ್ತಪಡಿಸುತ್ತೇನೆ. ಬಹಳ ವೇಗದಲ್ಲಿ ರೈಲ್ವೆ ಕೆಲಸ ನಡೆಯಬೇಕು ಎಂದು ಹೇಳುವಂಥ ಮಂತ್ರಿಗಳು ಇದ್ದಾರೆ, ಮತ್ತು ಹಲವಾರು ಕ್ಯಾಬಿನೆಟ್ ದರ್ಜೆಯ ಮಂತ್ರಿಗಳು ಕೇಂದ್ರದಲ್ಲಿ ದ್ದಾರೆ, ಅವರು ಹೊಸ ಹೊಸ ರೈಲು ಮಾರ್ಗಗಳನ್ನು ರಾಜ್ಯಕ್ಕೆ ದೊರಕಿಸುವ ಯತ್ನದಲ್ಲಿ ಸಫಲರಾಗಿಲ್ಲ, ವಿಫಲರಾಗಿದ್ದಾರೆನ್ನುವ ಮಾತನ್ನು ನಾನು ಹೇಳಬೇಕಾಗಿದೆ. ಈಗ ಇರತಕ್ಕ ಮಂತ್ರಿಮಂಡಲದವರು ಇನ್ನೂ ಚುರುಕಾಗಿ ಕೆಲಸ ಮಾಡಬೇಕು. ಈಗಲಾದರೂ ಒಂದೆರಡು ರೈಲು ಮಾರ್ಗಗಳನ್ನು ರಾಜ್ಯಕ್ಕೆ ದೊರಕಿಸುವಂಥ ಕಾರ್ಯವನ್ನು ತಾವು ಮಾಡುತ್ತೀರಾ ಇವುಗಳಿಗೆ ಫೀಸಿಬಿಲಿಟಿ ಇಲ್ಲ, ಮತ್ತೊಂದು ಇಲ್ಲ ಎಂದು ಹೇಳಿದರೆ ಅದನ್ನು ಕೇಳುವುದಕ್ಕೆ ನಾನು ತಯಾರು ಇಲ್ಲ. ತಾವು ತಮ್ಮ ಶಕ್ತಿಯನ್ನು ಉಪಯೋಗ ಮಾಡಿ ಕೆಲವು ಲೈನುಗಳನ್ನಾದರೂ ಕರ್ನಾಟಕದಲ್ಲಿ ಹೊಸದಾಗಿ ನಿರ್ಮಾಣ ಮಾಡುವುದಕ್ಕೆ ಮಂಜೂರಾತಿಯನ್ನು ಪಡೆಯುತ್ತೀರಾ?

ಶ್ರೀ ಆರ್. ಗುಂಡೂರಾವ್.—ಮಾನ್ಯ ದೇವೇಗೌಡರು ಹೇಳಿರುವುದಕ್ಕೆ ನಮ್ಮ ಭಿನ್ನಾಭಿಪ್ರಾಯವೇನೂ ಇಲ್ಲ. ಹಾಸನ ಮಂಗಳೂರು ರೈಲು ಮಾರ್ಗವನ್ನು ೬೦–೭೦ ವರ್ಷಗಳಿಂದ ನಾವು ಕೇಳುತ್ತಾ ಬಂದು ಈಗ ಆಗಿದೆ, ಕಾರಣಾಂತರಗಳಿಂದ ಅದು ನಾಲ್ಕೈದು ತಿಂಗಳಿಂದ ಉಪಯೋಗಕ್ಕೆ ಬರದ ಹಾಗೆ ಆಗಿದೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ರೈಲ್ವೆ ಸಂಚಾರದ ವಿಚಾರದಲ್ಲಿ ನಾವು ಬಹಳ ಹಿಂದೆ ಇದ್ದೇವೆ, ಹೊಸದಾಗಿ ನಮ್ಮ ಸರ್ಕಾರ ಕೇಂದ್ರದಲ್ಲಿ ಬಂದಿದೆ ನಾನು ಮಾನ್ಯ ಕಮಲಾಪತಿ ತ್ರಿಪಾಟಿಯವರ ಜೊತೆ ಮಾತನಾಡಿ ನಮ್ಮ ರಾಜ್ಯಕ್ಕೆ ಹೆಚ್ಚು ರೈಲ್ವೆ ಲೈನನ್ನು ಹಾಕುವುದಕ್ಕೆ ತಕ್ಕ ಪ್ರಯತ್ನ ಮಾಡುತ್ತೇನೆ.

ಶ್ರೀ ಎಚ್. ಗಂಗಾಧರನ್.—ಸತ್ಯಮಂಗಲದ ಲೈನನ್ನು ಹಾಕುವುದರಿಂದ ಮದ್ರಾಸ್‌ನವರಿಗೂ ಅನುಕೂಲವಾಗುತ್ತದೆ. ಈ ವಿಷಯದಲ್ಲಿ ತಮಿಳುನಾಡಿನವರನ್ನೂ ಜೊತೆಗೆ ಕರೆದುಕೊಂಡು ಪ್ರಯತ್ನ ಮಾಡಿದರೆ ಒಳ್ಳೆಯದಲ್ಲವೇ ?

ಶ್ರೀ ಆರ್. ಗುಂಡೂರಾವ್.—ತಮಿಳುನಾಡಿಗೆ ಅನುಕೂಲವಾಗುವಾಗ ಅವರೇಕೆ ಇದನ್ನು ಬೇಡ ಎಂದು ಹೇಳುತ್ತಾರೆ? ಕೇಂದ್ರಸರ್ಕಾರಕ್ಕೆ ಈ ವಿಷಯದಲ್ಲಿ ಅವರೂ ಕೂಡ ಒತ್ತಾಯಮಾಡುತ್ತಾರೆ, ಅವರೂ ನಮ್ಮ ಜೊತೆಯಲ್ಲಿ ಇದ್ದೇ ಇರುತ್ತಾರೆ.

ಶ್ರೀ ಪಂಪಾಪತಿ.—ಈಗ ಹೊಸದಾಗಿ ರೈಲ್ವೆ ಲೈನನ್ನು ಹಾಕುವುದರ ಜೊತೆಗೆ ಇರತಕ್ಕ ರೈಲುಗಳು ಸಮಯಕ್ಕೆ ಸರಿಯಾಗಿ ಬರುತ್ತಿಲ್ಲ ಕೇಂದ್ರದಲ್ಲಿ ನಮ್ಮವರೇ ರೈಲ್ವೆ ಮಂತ್ರಿಗಳಾಗಿರುವ ಸಮಯಕ್ಕೆ ಸರಿಯಾಗಿ ರೈಲುಗಳು ಬರುವ ವ್ಯವಸ್ಥೆ ಮಾಡುವಿರಾ?

ಶ್ರೀ ಆರ್. ಗುಂಡೂರಾವ್.—ಆ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ.

Chakra Dam project in Shimoga District

301 SRI ANAND KUNDA HEGDE (Bramhavar).—Will the Chief Minister be pleased to state.—

(a) whether it is a fact that earthen dam in Chakra Project (Chakra Savehaklu) of Shimoga District has been breached;

(b) whether it is a fact that cement supplied to Chakra Savehaklu and Varahi project work in the said district is being transported out side the District.

SRI R. GUNDU RAO (Chief Minister).—

(a) No But Central wall and stones in left bank portion of small dam with a stone wall at the source of the Chakra river have been scoured out due to heavy floods during rainy season in 1979 Reasons for this sinking is being examined

(b) No

ಶ್ರೀ ಆನಂದಕುಂದ ಹೆಗ್ಡೆ.—ಈ ಪ್ರಶ್ನೆಯು (ಅ) ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ. ನಾನು ಹೇಳುತ್ತೇನೆ ಈ ಚಕ್ರಾ ನದಿಯ ಭಾರಿ ಪ್ರವಾಹದಿಂದ ಉಕ್ಕಿ ಹರಿದು ಚಕ್ರಾ ನದಿಯ ಮೂಲದಲ್ಲಿ ಹಾಕಿರುವ ಕಲ್ಲಿನ ಗೋಡೆಗಳುಳ್ಳ ಸಣ್ಣ ಅಣೆಕಟ್ಟಿನ ಎಡದಂಡೆ ಭಾಗದಲ್ಲಿರುವ ಮಧ್ಯದ ಗೋಡೆ ಹಾಗೂ ಕಲ್ಲುಗಳು ಏನು ಕೊಚ್ಚಿಕೊಂಡು ಹೋಗಿವೆ, ಮತ್ತು ಇದರಲ್ಲಿ ಏನು ಕುಸಿದಿದೆ ಇದಕ್ಕೆ ಎಷ್ಟು ಮೇಟ್‌ನಲ್ಲಿರುವ ದೋಷವೇ ಕಾರಣ ಎಂದು ಹೇಳುತ್ತೇನೆ. ಆದುದರಿಂದ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ತಾವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಾ ಅನ್ನುವುದನ್ನು ಹೇಳುತ್ತೀರಾ

ಎರಡನೆಯದಾಗಿ ಈ ಪ್ರಾಜೆಕ್ಟ್‌ಗೆ ಬರತಕ್ಕಂಥಾ ಸಿಮೆಂಟ್ ಏನು ಇದೆ ಅದು ಬೇರೆ ಕಡೆ ಹೋಗುತ್ತಾ ಇದೆ, ಅದು ದುರುಪಯೋಗವಾಗುತ್ತಾ ಇದೆ, ಈ ಬಗ್ಗೆಯೂ ಸಹ ನಾನು ಪ್ರಶ್ನೆ ಕೇಳಿದ್ದೆ ಅದಕ್ಕೆ ಇಲ್ಲಾ ಎಂದು ಹೇಳಿದ್ದೀರಿ. ಈಗಲಾದರೂ ಅದಕ್ಕೆ ಸರಿಯಾದ ಉತ್ತರ ಕೊಡುತ್ತೀರಾ?

ಶ್ರೀ ಆರ್. ಗುಂಡೂರಾವ್.—ತಪ್ಪು ಮೊದಲನೆಯ ಪ್ರಶ್ನೆಗೆ ಪರಿಶೀಲಿಸಲಾಗುತ್ತಿದೆ ಎಂದು ನಾನಾ ಮೊದಲೇ ಉತ್ತರ ಕೊಟ್ಟಿದ್ದೇನೆ. ಇನ್ನು ಎರಡನೆಯದಾಗಿ ಇಲ್ಲಿಗೆ ಬರ ತಕ್ಕಂಥಾ ಸಿಮೆಂಟ್ ಬೇರೆ ಕಡೆಗೆ ಹೋಗುತ್ತಾ ಇದೆ, ದುರುಪಯೋಗವಾಗುತ್ತಾ ಇದೆ ಎಂದು ಕೇಳಿದ್ದಕ್ಕೆ, ಇಲ್ಲಾ ಎಂದು ನಾನು ಆಗಲೇ ಉತ್ತರ ಕೊಟ್ಟಿದ್ದೇನೆ. ಜೊತೆಗೆ ಬೇರೆ ಕಡೆ ಹೋಗುತ್ತಾ ಇದ್ದಂಥಾ ೨೦೦ ಮೂಟೆ ಸಿಮೆಂಟ್ ಅನ್ನು ಪೋಲೀಸಿನವರು ಹಿಡಿದಿದ್ದಾರೆ. ಆದರೆ ಆ ಸಿಮೆಂಟ್ ಈ ಪ್ರಾಜೆಕ್ಟ್‌ಗೇನೇ ಬಂದಂಥಾ ಸಿಮೆಂಟೋ ಅಥವಾ ಖಾಸಗಿಯವರಿಗೆ ಸೇರಿದ ಸಿಮೆಂಟೇ ಎನ್ನುವುದು ವಿಚಾರಣೆಯ ಹಂತದಲ್ಲಿದೆ. ಈಗ ಯಾವುದನ್ನು ಹೇಳುವುದಕ್ಕಾಗುವುದಿಲ್ಲಾ. ತಾವು ಪ್ರತ್ಯೇಕವಾಗಿ ಸೂಕ್ತ ಉದಾಹರಣೆ ಕೊಟ್ಟು ತಿಳಿಸಿದರೆ ಆ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎ. ಜಿ. ಕೊಡ್ಗಿ.—ಈ ಚಕ್ರಾ ನದಿಯು ಭಾರಿ ಪ್ರವಾಹದಿಂದ ಉಕ್ಕಿ ಹರಿದು ಚಕ್ರಾ ನದಿಯ ಮೂಲದಲ್ಲಿ ಹಾಕಿರುವ ಗೋಡೆಗಳುಳ್ಳ ಸಣ್ಣ ಅಣೆಕಟ್ಟಿನ ಎಡದಂಡೆ ಭಾಗದಲ್ಲಿರುವ ಮಧ್ಯದ